ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.]
ಅಧೀಕ್ಷಕ ಇಂಜನೀಯರ[ವಿ], ರವರ ಕಛೇರಿ,
ರಿ.ಸ.ನಂ : ೮೫ಬ, ಬಿ.ಇ.ಓ/ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರಿ ಆಫೀಸ್ ಹತ್ತಿರ,
ಹಂಚಿನಾಳ ಲೇಔಟ್, ಪೂ.ಬೆಂ. ರಸ್ತೆ, ಹಾವೇರಿ – 581110.

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
O/ O Superintending Engineer(Ele),
Reg No : 85B, Near B.E.O/ Haveri Urban Development Authority Office,
Hanchinal Layout, P.B. Road, Haveri-581110.

Telephone No : 08375-232632
Fax No : 08375-232625
Web Site : www.hescom.karnataka.gov.in
E-mail ID : seehvr.hescom@gmail.com
: dcahaveri@yahoo.com

Corporate Identity (CIN) : U31401KA2002SGC030437.

# ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ ಹು.ವಿ.ಸ.ಕಂ.ನಿ, ಹಾವೇರಿ.

**ಹಾಜರಿದ್ದವರು,**
1] ಶ್ರೀ. ನಾಗಪ್ಪ. ಎಸ್. ಹೆಚ್, ಅಧೀಕ್ಷಕ ಇಂಜನೀಯರ[ವಿ] ಹಾಗೂ ಅಧ್ಯಕ್ಷರು.
2] ಶ್ರೀ. ತಿಪ್ಪೇಶಿ. ಕೆ, ಸದಸ್ಯರು.
3] ಶ್ರೀ. ಅನಂತ. ಫಕ್ಕೀರಪ್ಪ. ಚಿಗರೇರ, ಸದಸ್ಯರು.

**ಪ್ರಕರಣ ಸಂಖ್ಯೆ : 03.**

**Shri. Vnoda,**
**345, Cannaught Road Off, Queens Road,**
**Tasker Town, Bengalore – 560052,**
**[GTL Infrastructure Limited].** -------- ದೂರುದಾರರು.

ವಿರುದ್ಧ,

**ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ[ವಿದ್ಯುತ್],**
**ಕಾರ್ಯ & ಪಾಲನಾ ಉಪ-ವಿಭಾಗ, ಹೆಸ್ಕಾಂ, ಬ್ಯಾಡಗಿ.** -------- ಪ್ರತಿವಾದಿ.

1. ಪ್ರಕರಣದ ಸಾರಾಂಶ ಕೆಳಗಿನಂತಿರುತ್ತದೆ :-

I. ಅರ್ಜಿದಾರರಾದ Shri. Vinoda, 345 Cannaught Road Off, Queens Road, Tasker Town, Bengalore [GTL Infrastructure Limited] ಇವರು ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ [ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ ಮತ್ತು ಓಂಬುಡ್ಸಮನ್] ನಿಯಮಗಳು-2004 ಮತ್ತು ತಿದ್ದುಪಡಿ ಆದೇಶ ಸಂಖ್ಯೆ : ಡಿ/ 37/ 03, ದಿನಾಂಕ : 10.05.2013 ರಡಿಯಲ್ಲಿ ಒದಗಿಸಲಾದ ಅವಕಾಶದಡಿಯಲ್ಲಿ ದೂರನ್ನು ದಾಖಲಿಸಿ ದಿನಾಂಕ : 19.06.2024 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ [ಸಿ.ಜಿ.ಆರ್.ಎಫ್] ವೇದಿಕೆಗೆ ಅರ್ಜಿ ಸಲ್ಲಿಸಿದ್ದರು. ಆದರೆ ಗ್ರಾಹಕರಾದ ಶ್ರೀ. ವಿನೋದ ಇವರು ಸ್ವತ: ಈ ಪ್ರಕರಣದಲ್ಲಿ ವಾದಿಯಾಗಿರುವರು.

II. ಸದರಿ ಸ್ಥಾವರ ಬಾಕಿ ತುಂಬದೇ ಇರುವ ಕಾರಣ ದಿನಾಂಕ : 25.03.2018 ರಂದು ವಿದ್ಯುತ್ ಸಂಪರ್ಕ ನಿಲಗಡೆಗೊಳಿಸಲಾಗಿ, ಮುಂದಿನ ಎರಡು ತಿಂಗಳು ಸಹ ಕನಿಷ್ಟ ಶುಲ್ಕ ಬೇಡಿಕೆ ಮಾಡಿ, ಬಾಕಿ ಮೊತ್ತ ಪಾವತಿಸಲು ಸಂಬಂಧಿಸಿದ ಗ್ರಾಹಕರಿಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ಗ್ರಾಹಕರು ಸದರಿ ಮೊಬೈಲ್ ಟವರನ್ನು ಬೇರೆಯವರಿಗೆ ಮಾರಾಟವನ್ನು ಮಾಡಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ : 11.06.2018 ರಂದು ರೂ.155569/- ಬಾಕಿ ಮೊತ್ತವನ್ನು ಪಾವತಿಸುವಂತೆ ಪತ್ರದ ಮೂಲಕ ತಿಳಿಸಿದಾಗ, ಸದರಿ ಪತ್ರಕ್ಕೆ ಯಾವುದೇ ಉತ್ತರವು ಬಂದಿರುವುದಿಲ್ಲ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ[ವಿದ್ಯುತ್], ಹೆಸ್ಕಾಂ, ಬ್ಯಾಡಗಿಯವರು ತಿಳಿಸಿದರು.

[ಮು.ತಿ.ನೋ]

III. ದಿನಾಂಕ : 03.10.2018 ರಂದು GTL Infrastructure Limited ರವರು ಸದರಿ ಸ್ಥಾವರವನ್ನು ನಾವು ಖರೀದಿಯನ್ನು ಮಾಡಿಕೊಂಡಿರುವುದರಿಂದ ಆರ್. ಆರ್ ಸಂಖ್ಯೆ : MOT-1274C ಸ್ಥಾವರವನ್ನು ಶಾಶ್ವತ ವಿದ್ಯುತ್ ನಿಲುಗಡೆ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯಲ್ಲಿ ಭದ್ರತಾ ಠೇವಣಿ ಮೊತ್ತವನ್ನು ಹೊಂದಾಣಿಕೆ ಮಾಡಿಕೊಂಡು ಉಳಿದ ಮೊತ್ತವನ್ನು ಭರಣ ಮಾಡುತ್ತವೆ ಎಂದು ಪತ್ರದ ಮೂಲಕ ತಿಳಿಸಿರುವುದನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಹೆಸ್ಕಾಂ, ಬ್ಯಾಡಗಿಯವರು ತಮ್ಮ ಹೇಳಿಕೆ ಮತ್ತು ದಾಖಲೆಗಳೊಂದಿಗೆ ತಿಳಿಸಿರುತ್ತಾರೆ.

IV. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಕಾರ್ಯ & ಪಾಲನಾ ಉಪ-ವಿಭಾಗ, ಹೆಸ್ಕಾಂ, ಬ್ಯಾಡಗಿ ರವರು GTL Infrastructure Limited ರವರು ದಿನಾಂಕ : 03.10.2018 ರಂದು ತಮ್ಮ ಕಛೇರಿಗೆ ಸದರಿ ಸ್ಥಾವರವನ್ನು ಶಾಶ್ವತವಾಗಿ ವಿದ್ಯುತ್ ನಿಲುಗಡೆ ಮಾಡುವಂತೆ ಕೋರಿರುವ ಅನ್ವಯದಂತೆ ದಿನಾಂಕ : 10.10.2018 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಎಲ್.ಟಿ.ಎಮ್.ಆರ್ ಉಪ-ವಿಭಾಗ, ಹೆಸ್ಕಾಂ, ರಾಣೇಬೆನ್ನೂರ ರವರಿಗೆ ಸದರಿ ಸ್ಥಾವರದ ಮಾಪಕವನ್ನು ರೇಟಿಂಗ್ ಮಾಡುವಂತೆ ಕೋರಲಾಗಿರುತ್ತದೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಎಲ್.ಟಿ.ಎಮ್.ಆರ್ ಉಪ-ವಿಭಾಗ, ಹೆಸ್ಕಾಂ, ರಾಣೇಬೆನ್ನೂರ ರವರು ಮಾಪಕ ಪರೀವಿಕ್ಷಣೆ ಮಾಡಿ, ಸದರಿ ಮಾಪಕವು ಸರಿಯಾಗಿ ಇರುವುದಾಗಿ ತಿಳಿಸಿ, ಅಂತಿಮ ಗುಣಾಂಕ 85461.7 ರ ಪ್ರಕಾರ ನಿಯಮಾವಳಿಗಳ ಅನುಸಾರ ಕ್ರಮವನ್ನು ಜರುಗಿಸಿರುವುದು ಸರಿಯಾಗಿರುತ್ತೆದೆ ಎಂದು ತಿಳಿಸಿರುವುದನ್ನು ಬ್ಯಾಡಗಿ ಉಪ-ವಿಭಾಗಾಧಿಕಾರಿಗಳು ದಾಖಲೆಗಳನ್ನು ಸಲ್ಲಿಸಿರುತ್ತಾರೆ.

V. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಹೆಸ್ಕಾಂ, ಬ್ಯಾಡಗಿ ರವರು ದಿನಾಂಕ : 15.07.2021 ರವರೆಗೂ ಸದರಿ ಸ್ಥಾವರದ ಬಾಕಿ ಮೊತ್ತವನ್ನು ಪಾವತಿಸದೇ ಇರುವ ಕಾರಣ ಬಾಕಿ ಮೊತ್ತವನ್ನು ಮರು ಪಾವತಿಸುವಂತೆ ಬ್ಯಾಡಗಿ ರವರ ಪತ್ರ ಸಂಖ್ಯೆ : 1010-13 ರಲ್ಲಿ GTL Infrastructure Limited ರವರಿಗೆ ಪತ್ರ ಬರೆದು, ಸದರಿ ಪತ್ರದಲ್ಲಿ ತಪ್ಪಿದಲ್ಲಿ ಅವರದೇ ಇನ್ನೊಂದು ಸ್ಥಾವರ ಸಂಖ್ಯೆ : BYD-6135C GLT Tower ಗೆ ವರ್ಗಾವಣೆ ಮಾಡಲಾಗುವುದು ಎಂದು ತಿಳಿಸಿರುತ್ತಾರೆ. ಮೇ-2022 ರ ವರೆಗೆ ಬಾಕಿ ಮೊತ್ತವನ್ನು ಪಾವತಿಸದೇ ಇರುವ ಕಾರಣ ಒಟ್ಟು ಬಾಕಿ ರೂ.159438/- ಗಳನ್ನು BYD-6135C GLT Tower ಗೆ ವರ್ಗಾವಣೆ ಮಾಡಲಾಗಿದೆ ಎಂದು ಬ್ಯಾಡಗಿ ಉಪ-ವಿಭಾಗಾಧಿಕಾರಿಗಳು ತಿಳಿಸಿರುತ್ತಾರೆ.

VI. GTL Infrastructure Limited ರವರ ಇನ್ನೊಂದು ಸ್ಥಾವರ [BYD-6135C GLT Tower] ಕ್ಕೆ ವರ್ಗಾವಣೆ ಮಾಡಿದ ನಂತರ, ಒಟ್ಟು ಬಾಕಿ ರೂ.159438/- ಹಿಂಬಾಕಿ ಮೊತ್ತದಲ್ಲಿ ದಿನಾಂಕ : 27.07.2022 ರಂದು ರೂ.79719/- ರಶೀದಿ ಸಂಖ್ಯೆ : 202200007966 ರಲ್ಲಿ ಭರಣ ಮಾಡಿರುತ್ತಾರೆ ಎಂದು ವಿವರಣೆಯೊಂದಿಗೆ ಸಹಾಯಕ ಲೆಕ್ಕಾಧಿಕಾರಿ, ಹೆಸ್ಕಾಂ ಬ್ಯಾಡಗಿಯವರು ದಾಖಲೆಗಳೊಂದಿಗೆ ವಾದವನ್ನು ಮಂಡಿಸಿರುತ್ತಾರೆ.

**3 ನೇ ಪುಟಕ್ಕೆ ಮುಂದುವರೆದಿದೆ>>>>>**

VII. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ : 19.01.2023 ರಂದು ಜರುಗಿದ ಗ್ರಾಹಕರ ಕುಂದುಕೊರತೆ ನಿವಾರಣಾ ಸಭೆಯ ವೇದಿಕೆಯಲ್ಲಿ ಮತ್ತು ಸಭೆಯ ನಡಾವಳಿಗಳ ಪತ್ರದಲ್ಲಿ GTL Infrastructure Limited ರವರಿಗೆ ಏರಸೆಲ್ ಮೊಬೈಲ್ ಕಂಪನಿಯವರಿಂದ ನಿಮ್ಮ ಕಂಪನಿಯವರು ಖರೀದಿಯನ್ನು ಮಾಡಿಕೊಂಡಿರುವ ಖರೀದಿ ಕರಾರು ಪತ್ರ ಮತ್ತು ಒಡಂಬಡಿಕೆ [Deed of Purchase & Deed of Agreement] ಪತ್ರಗಳ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ ಈ ದಿನದ ಸಭೆಯಲ್ಲಿಯು ಸಹಾ ಸದರಿ ದಾಖಲೆ ಪತ್ರಗಳನ್ನು ಸಲ್ಲಿಸಿದೇ ಇರುವುದು ಕಂಡು ಬಂದಿರುತ್ತದೆ.

VIII. ಗ್ರಾಹಕರಾದ Shri. Vinoda, 345 Cannaught Road Off, Queens Road, Tasker Town, Bengalore, GTL Infrastructure Limited ಇವರು ಏರಸೆಲ್ ಮೊಬೈಲ್ ಕಂಪನಿಯವರಿಂದ ನಮ್ಮ ಕಂಪನಿಯವರು ಸದರಿ ಸ್ಥಾವರವನ್ನು ಖರೀದಿ ಮಾಡಿಕೊಂಡದಾಗಿನಿಂದ ಇಲ್ಲಿಯವರೆಗೂ ಉಪಯೋಗವನ್ನೇ ಮಾಡಿಕೊಂಡಿರುವುದಿಲ್ಲ, ಆದ ಕಾರಣ ಸದರಿ ಸ್ಥಾವರದ ಹಿಂಬಾಕಿ ಬಿಲ್ಲಿನ ಮೊತ್ತಕ್ಕೆ ತಾವು ಭರಣ ಮಾಡಲು ಬದ್ಧರಾಗಿರುವುದಿಲ್ಲ ಎಂದು ವಾದವನ್ನು ಮಂಡಿಸಿರುತ್ತಾರೆ.

2. **<u>ಅರ್ಜಿದಾರರ ವಾದಗಳು</u>** :-

ಗ್ರಾಹಕರಾದ ಶ್ರೀ. ವಿನೋದ ರವರು ವಿಚಾರಣೆಯ ದಿನ ತಮ್ಮ ಹೇಳಿಕೆಗಳನ್ನು ಈ ಕೆಳಗಿನಂತೆ ಮಂಡಿಸಿರುತ್ತಾರೆ.

I. ಫೆಬ್ರುವರಿ – 2015 ರಿಂದ ಡಿಸೆಂಬರ – 2017 ರವರೆಗೆ ನಮ್ಮ ಸ್ಥಾವರಕ್ಕೆ ಬಂದು ಮಾಪಕ ನೋಡಿ ರೀಡಿಂಗನ್ನು ಮಾಡದೇ ಎಮ್.ಎನ್.ಆರ್ ಅಂತಾ ಬಿಲ್ಲನ್ನು ವಿತರಿಸಿರುತ್ತಾರೆ. ಅದರ ಪ್ರಕಾರ ನಾವು ನಮ್ಮ ಕಂಪನಿ ನಿಯಮಾವಳಿಗಳ ಪ್ರಕಾರ ಬಿಲ್ಲನ್ನು ಪಾವತಿಸಿರುತ್ತೇವೆ.

II. ಸರಿ ಸುಮಾರು ತಿಂಗಳು ಗತಿಸಿದರು ಎಮ್.ಎನ್.ಆರ್ ಪ್ರಕಾರ ಮಾಪಕವನ್ನು ಬದಲಾವಣೆ ಮಾಡಲು ಸಂಬಂಧಿಸಿದ ಅಧಿಕಾರಿಗಳು ಯಾಕೇ ಕ್ರಮ ಜರುಗಿಸಿರುವುದಿಲ್ಲ.

III. ನಮ್ಮ ಸ್ಥಾವರವು ಎಮ್.ಎನ್.ಆರ್ ಅಂತ ಗೊತ್ತು ಆದ ಬಳಿಕ ಅದನ್ನು ಯಾಕೇ ಸ್ಥಾನಿಕವಾಗಿ ತಪಾಸಣೆ ಮಾಡಸಲಿಲ್ಲಾ.

IV. ಎಮ್.ಎನ್.ಆರ್ ಆದ ಬಳಿಕ ತಕ್ಷಣವೇ ಮಾಪಕ ಬದಲಾವಣೆಗೆ ಯಾಕೇ ಕ್ರಮ ಕೈಗೊಳ್ಳಲಿಲ್ಲಾ.

V. ಡಿ.ಎಲ್ ಅಂತಾ ಬಿಲ್ಲನ್ನು ವಿತರಿಸಿದ್ದರೇ ನಾವು ಹಣವನ್ನು ಭರಣ ಮಾಡಲೇಬೇಕಾಗಿರುತ್ತದೆ.

VI. ಅಲ್ಲಿಂದ ಇಲ್ಲಿಯವರೆಗೂ ಮಾಪಕ ಓದುಗರಿಗೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ.

VII. ನಿಮ್ಮ ಮಾಪಕ ಓದುಗ ಬಿಲ್ಲನ್ನು ನೀಡಿರುವ ಪ್ರಕಾರ ನಾವು ಪ್ರತಿ ಮಾಹೆಯಲ್ಲಿ ಬಿಲ್ಲು ವಿತರಿಸಿದ ತಕ್ಷಣವೇ ಬಿಲ್ಲಿನಲ್ಲಿ ನಮೂದಿಸಿರುವ ಮೊತ್ತವನ್ನು ಭರಣ ಮಾಡಿರುತ್ತೇವೆ.

VIII. ಎಮ್.ಎನ್.ಆರ್ ಆದರೆ ಮೂರು ತಿಂಗಳೊಗಾಗಿ ಮಾಪಕ ಬದಲಾವಣೆಗಾಗಿ ಕ್ರಮ ಜರುಗಿಸಿ, ಮಾಪಕ ಬದಲಾವಣೆ ಮಾಡಿ, ನಂತರ ಬಿಲ್ಲನ್ನು ನೀಡಿದ್ದರೆ ಅದರ ಪ್ರಕಾರ ವಿದ್ಯುತ್ ಸುಡತಿ ಬಿಲ್ಲಿನ ಮೊತ್ತವನ್ನು ಭರಣ ಮಾಡಲು ಸಾಧ್ಯವಾಗುತ್ತಿತ್ತು. ಆಧರೆ ಸರಿ ಸುಮಾರು ತಿಂಗಳವರೆಗೆ ಎಮ್.ಎನ್.ಆರ್ ಅಂತ ನಮೂದಿಸಿ ಬಿಲ್ಲು ವಿತರಿಸಿದರೆ ನಮ್ಮಿಂದ ಹಿಂಬಾಕಿ ಮೊತ್ತವನ್ನು ಭರಣ ಮಾಡಲು ಸಾಧ್ಯವಾಗುವುದಿಲ್ಲ.

**[ಪು.ತಿ.ನೋ]**

IX. ಈ ಮೇಲಿನ ಎಲ್ಲಾ ಕಾರಣಗಳು ತಮ್ಮ ಇಲಾಖೆಯ ನೌಕರರು/ ಅಧಿಕಾರಿಗಳಿಂದ ಆಗಿರುತ್ತದೆ. ಆದ ಕಾರಣ ಹಿಂಬಾಕಿ ಮೊತ್ತವನ್ನು ಭರಣ ಮಾಡಲು ಸಾಧ್ಯವೇ ಆಗುವುದಿಲ್ಲ.

3. **ಪ್ರತಿ ವಾದಿಯವರ ವಾದಗಳು** :-

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಕಾರ್ಯ & ಪಾಲನಾ ಉಪ-ವಿಭಾಗ, ಹೆಸ್ಕಾಂ, ಬ್ಯಾಡಗಿ ರವರ ವಾದಗಳು ಮತ್ತು ಅವರು ಸಲ್ಲಿಸಿರುವ ದಾಖಲೆಗಳು :-

I. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಎಲ್.ಟಿ.ಎಮ್.ಆರ್ ಉಪ-ವಿಭಾಗ, ಹೆಸ್ಕಾಂ, ರಾಣೇಬೆನ್ನೂರ ರವರು ಮಾಪಕ ಪರೀವಿಕ್ಷಣೆ ಮಾಡಿ ವರದಿಯನ್ನು ನೀಡಿದ್ದು, ಮಾಪಕವು ಸರಿಯಾಗಿರುತ್ತದೆಂದು ತಿಳಿಸಿರುತ್ತಾರೆ. ಆದ ಕಾರಣ ಮಾಪಕವನ್ನು ಬದಲಾವಣೆ ಮಾಡಲು ಅವಕಾಶವೇ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

II. ಎಲ್.ಟಿ.ಎಮ್.ಆರ್ ಉಪ-ವಿಭಾಗ, ಹೆಸ್ಕಾಂ, ರಾಣೇಬೆನ್ನೂರ ರವರು ಮಾಪಕ ಪರೀವಿಕ್ಷಣೆ ಮಾಡಿದ ನಂತರ ಜನೇವರಿ-2015 ರಿಂದ ಜನೇವರಿ-2018 ರ ವರೆಗೆ ಸರಾಸರಿ ವಿದ್ಯುತ್ ಬಳಕೆಯ ಒಟ್ಟು ಯುನಿಟ್ 13495 ಗಳ ಬಿಲ್ಲನ್ನು ಪಾವತಿಸಿರುತ್ತಾರೆ. ಒಟ್ಟು : 28508 ಯುನಿಟ್‌ಗಳಲ್ಲಿ 13495 ಯುನಿಟ್‌ಗಳನ್ನು ಕಳೆದು ಉಳಿದ ಒಟ್ಟು : 15013 ಯುನಿಟ್‌ಗಳ ಹಿಂಬಾಕಿ ಮೊತ್ತ ರೂ.131338/- ಗಳನ್ನು ಆಕರಣೆ ಮಾಡಿ ಫೆಬ್ರುವರಿ-2018 ರಲ್ಲಿ ಬೇಡಿಕೆ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

III. ಸದರಿ ಸ್ಥಾವರದ ಬಾಕಿ ತುಂಬದೇ ಇರುವ ಕಾರಣ ದಿನಾಂಕ : 25.03.2018 ರಂದು ವಿದ್ಯುತ್ ಸಂಪರ್ಕ ನಿಲಗಡಗೊಳಿಸಲಾಗಿದೆ. ಸಂಬಂಧಿಸಿದವರಿಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ನಾವು ಸದರಿ ಮೊಬೈಲ್ ಕಂಪನಿಯನ್ನು ಬೇರೆಯವರಿಗೆ ಮಾರಾಟಮಾಡಲಾಗಿದೆ ಎಂದು ತಿಳಿಸಿದಾಗ ತಕ್ಷಣ ಸದರಿ ಸ್ಥಾವರವನ್ನು ಲಾಂಗ್‌ಡಿಸ್‌ಗೆ ಹಾಕಿ, ಬಾಕಿ ಮೊತ್ತ ರೂ.155569/- ಗಳನ್ನು ಭರಣಮಾಡುವಂತೆ ದಿನಾಂಕ : 11.06.2018 ರಂದು ಪತ್ರಗಳ ಮೂಲಕ ತಿಳಿಸಿದಾಗ, ಅರ್ಜಿದಾರರು ಸದರಿ ಸ್ಥಾವರವನ್ನು ನಮ್ಮ ಕಂಪನಿಯವರು ಖರೀದಿ ಮಾಡಿಕೊಂಡಿದ್ದು ಇರುತ್ತದೆ. ಆದರೆ ನಾವು ಅದನ್ನು ಚಾಲನೆಯಲ್ಲಿ ಇಟ್ಟಿರುವುದಿಲ್ಲ ಎಂದು ತಿಳಿಸುತ್ತಾ, ದಿನಾಂಕ : 03.10.2018 ರಂದು ಸದರಿ ಸ್ಥಾವರವನ್ನು ಶಾಶ್ವತ ವಿದ್ಯುತ್ ನಿಲುಗಡೆ ಮಾಡುವಂತೆ ತಮ್ಮ ಕಛೇರಿಗೆ ಬಂದು ಅರ್ಜಿಯನ್ನು ನೀಡಿ ಭದ್ರತಾ ಠೇವಣಿ ಮೊತ್ತವನ್ನು ಹೊಂದಾಣಿಕೆ ಮಾಡಿಕೊಂಡು ಉಳಿದ ಮೊತ್ತವನ್ನು ಭರಣ ಮಾಡುತ್ತೇವೆ ಎಂದು ಅರ್ಜಿಯಲ್ಲಿ ತಿಳಿಸಿದ್ದು ಇರುತ್ತದೆ ಎಂದು ತಿಳಿಸಿರುತ್ತಾರೆ.

IV. GTL Infrastructure Limited ರವರ ಇನ್ನೊಂದು ಸ್ಥಾವರ [BYD-6135C GLT Tower] ಕ್ಕೆ ವರ್ಗಾವಣೆ ಮಾಡಿದ ನಂತರ, ಒಟ್ಟು ಬಾಕಿ ರೂ.159438/- ಹಿಂಬಾಕಿ ಮೊತ್ತದಲ್ಲಿ ದಿನಾಂಕ : 27.07.2022 ರಂದು ರೂ.79719/- ರಶೀದಿ ಸಂಖ್ಯೆ : 202200007966 ರಲ್ಲಿ ಭರಣ ಮಾಡಿರುತ್ತಾರೆ ಎಂದು ವಿವರಣೆಯೊಂದಿಗೆ ಸಹಾಯಕ ಲೆಕ್ಕಾಧಿಕಾರಿ, ಹೆಸ್ಕಾಂ ಬ್ಯಾಡಗಿಯವರು ದಾಖಲೆಗಳೊಂದಿಗೆ ತಿಳಿಸಿರುತ್ತಾರೆ.

V. ಸದರಿ ಇನ್ನೂಳಿದ ಮೊತ್ತವನ್ನು ಗ್ರಾಹಕರು ಇಲ್ಲಿಯವರೆಗೆ ಭರಣ ಮಾಡಿರುವುದಿಲ್ಲ ಎಂಬುದನ್ನು ತಿಳಿಸಲಾಗಿದೆ.

**5 ನೇ ಪುಟಕ್ಕೆ ಮುಂದುವರೆದಿದೆ>>>>>**

**ಸಲ್ಲಿಸಿದ ದಾಖಲೆಗಳು** :-

1. ಹಣ ಭರಣ ಮಾಡಲು ತಿಳಿಸಿರುವ ಪತ್ರಗಳು.
2. ಗ್ರಾಹಕರ ಅರ್ಜಿ.
3. ಇನ್ನಿತರೆ ದಾಖಲೆಗಳು.

4. **ಈ ವಿವಾದದಲ್ಲಿ ವೇದಿಕೆಯು ಉತ್ತರಿಸಬೇಕಾದ ವಿಷಯಗಳು** :-

I. ಗ್ರಾಹಕರು ಅವರ ಅರ್ಜಿಯಲ್ಲಿ ಕೋರಿರುವಂತೆ ದಿನಾಂಕ : 19.01.2023 ರಂದು ಜರುಗಿದ ಗ್ರಾಹಕರ ಕುಂದುಕೊರತೆ ನಿವಾರಣಾ ಸಭೆಯ ವೇದಿಕೆಯಲ್ಲಿ ಚರ್ಚಿಸಿದಂತೆ ಮತ್ತು ಸಭೆಯ ನಡಾವಳಿಗಳ ಪತ್ರದಲ್ಲಿ ಹಾಗೂ ಈ ಕಛೇರಿಯಿಂದ ದಿನಾಂಕ : 23.02.2023 & 10.06.2024 ರ ಪತ್ರಗಳಲ್ಲಿ ಏರಸೆಲ್ ಮೊಬೈಲ್ ಕಂಪನಿಯವರಿಂದ ನಿಮ್ಮ ಕಂಪನಿಯವರು ಖರೀದಿಯನ್ನು ಮಾಡಿಕೊಂಡಿರುವ ಖರೀದಿ ಕರಾರು ಪತ್ರ ಮತ್ತು ಒಡಂಬಡಿಕೆ [Deed of Purchase & Deed of Agreement] ಪತ್ರಗಳ ದಾಖಲೆಗಳ ಪತ್ರಗಳು ಹಾಗೂ ಏರಸೆಲ್ ಮೊಬೈಲ್ ಕಂಪನಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ಕರಾರು ಪತ್ರಗಳು, ಒಡಂಬಡಿಕೆಗಳು ಇತ್ಯಾದಿ ದಾಖಲೆಗಳು ಇದ್ದರೆ ಸಲ್ಲಿಸುವಂತೆ ಸೂಚಿಸಲಾಗಿತ್ತು ಆದರೆ ಸದರಿ ಕೋರಿದ ದಾಖಲೆಗಳನ್ನು ಸಲ್ಲಿಸದೇ ಇರುವುದನ್ನು ಎರಡು ಬಾರಿ ಜರುಗಿದ ಗ್ರಾಹಕರ ಕುಂದುಕೊರತೆ ನಿವಾರಣಾ ಸಭೆಯ ವೇದಿಕೆಯಲ್ಲಿ ಗಮನಿಸಲಾಗಿದೆ. ಆದ ಕಾರಣ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳುವುದು ಸಮಂಜಸವಾದ ವಿಷಯವಾಗಿರುತ್ತದೆ ಎಂಬುದನ್ನು ಒಟ್ಟಾರೆ ಅಭಿಪ್ರಾಯವನ್ನು ಪಡೆಯಲಾಗಿದೆ.

II. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ[ವಿದ್ಯುತ್], ಕಾರ್ಯ & ಪಾಲನಾ ಉಪ-ವಿಭಾಗ, ಹೆಸ್ಕಾಂ, ಬ್ಯಾಡಗಿ ರವರು ಮಾಪಕ ತಪಾಸಣಾ ಉಪ-ವಿಭಾಗದ ವರದಿಗಳ ಆಧಾರದ ಮೇಲೆ ಕ್ರಮ ಜರುಗಿಸಿರುವುದು, ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳುವುದು ಸಮಂಜಸವಾದ ವಿಷಯವಾಗಿರುತ್ತದೆ ಎಂಬುದನ್ನು ಒಟ್ಟಾರೆ ಅಭಿಪ್ರಾಯವನ್ನು ಪಡೆಯಲಾಗಿದೆ.

5. **ಚರ್ಚೆ ಹಾಗೂ ವಿಶ್ಲೇಷಣೆಯಲ್ಲಿ ಕಂಡು ಬಂದ ಅಂಶಗಳು** :-

ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಮತ್ತು ವಾದಿ ಹಾಗೂ ಪ್ರತಿವಾದಿಯವರ ಹೇಳಿಕೆಗಳನ್ನು ಆಲಿಸಿದ ನಂತರ ವೇದಿಕೆಯು ಈ ಕೆಳಕಂಡ ಅಂಶಗಳನ್ನು ಗಮನಿಸಿರುತ್ತದೆ :-

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಹಕರು ತಮ್ಮ ಕಂಪನಿ ನಿಯಮಾನುಸಾರ ಸ್ಥಾವರದ ರೀಡಿಂಗ್ ಖಾತಾ ಪುಸ್ತಕದ ದಾಖಲೆ ಮತ್ತು ಈ ಕಛೇರಿಯಿಂದ ಕೋರಿರುವ ದಾಖಲೆಗಳನ್ನು ಸಲ್ಲಿಸಿದೇ ಬರೇ ವಾದವನ್ನು ಮಂಡಿಸಿರುತ್ತಾರೆ. ಆದ ಕಾರಣ ಪ್ರತಿವಾದಿಗಳು ಚಾಲ್ತಿಯಲ್ಲಿ ಇರುವ ನಿಯಮಾವಳಿಗಳ ಪ್ರಕಾರ ಕ್ರಮಕೈಗೊಂಡಿದ್ದು ಇರುತ್ತದೆ.
2. ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಹಾವೇರಿ ಅಧ್ಯಕ್ಷರು ಹಾಗೂ ಸದಸ್ಯರು ಈ ಕುರಿತು ಒಮ್ಮತದ ಅಭಿಪ್ರಾಯದೊಂದಿಗೆ ಈ ಕೆಳಗಿನಂತೆ ಆದೇಶ ಮಾಡಿರುತ್ತಾರೆ.

**[ಪು.ತಿ.ನೋ]**

**ಆದೇಶ ಸಂಖ್ಯೆ : ಹಾ/ಗ್ರಾಕುಕೊನಿವೇ/ಪ್ರ.ಸಂ-03/CR-29/2024-25/** C4S-74

**ದಿನಾಂಕ** 30 JUL 2024

# ಆದೇಶ

1. GTL Infrastructure Limited ರವರು ದಿನಾಂಕ : 03.10.2018 ರಂದು ಬ್ಯಾಡಗಿ ಉಪ-ವಿಭಾಗ ಕಛೇರಿಗೆ ಬಂದು ಸದರಿ ಸ್ಥಾವರವನ್ನು ಶಾಶ್ವತವಾಗಿ ವಿದ್ಯುತ್ ನಿಲುಗಡೆ ಮಾಡುವಂತೆ ಕೋರಿರುವ ಅನ್ವಯದಂತೆ ಹಾಗೂ GTL Infrastructure Limited ರವರ ಇನ್ನೊಂದು ಸ್ಥಾವರ [BYD-6135C GLT Tower] ಕ್ಕೆ ವರ್ಗಾವಣೆ ಮಾಡಿದ ನಂತರ, ಒಟ್ಟು ಬಾಕಿ ರೂ.159438/- ಹಿಂಬಾಕಿ ಮೊತ್ತದಲ್ಲಿ ದಿನಾಂಕ : 27.07.2022 ರಂದು ರೂ.79719/- ರಶೀದಿ ಸಂಖ್ಯೆ : 202200007966 ರಲ್ಲಿ ಭರಣ ಮಾಡಿರುವ ಕಾರಣ ಇನ್ನೂಳಿದ ಮೊತ್ತವನ್ನು ಭರಣ ಮಾಡಬೇಕೆಂದು ಸದರಿ ಗ್ರಾಹಕರಿಗೆ ಆದೇಶಿಸಲಾಗಿದೆ.

2. ಪ್ರತಿವಾದಿಯವರು ಸದರಿ ಗ್ರಾಹಕರಿಗೆ ಹಿಂಬಾಕಿ ಮೊತ್ತವನ್ನು ಭರಣ ಮಾಡಲು ಈಗಾಗಲೇ ಪತ್ರದ ಮೂಲಕ ಸದರಿ ಗ್ರಾಹಕರಿಗೆ ತಿಳಿಸಿರುವುದು ಕ್ರಮಬದ್ಧವಾಗಿರುತ್ತದೆ. ಇನ್ನೂಳಿದ ಮೊತ್ತ ರೂ.79719/- ಗಳನ್ನು ಗ್ರಾಹಕರಿಂದ ಭರಣ ಮಾಡಿಸಿಕೊಳ್ಳಲು ಆದೇಶಿಸಲಾಗಿದೆ, ಈ ಪ್ರಯುಕ್ತ ಸದರಿ ಪ್ರಕರಣವನ್ನು ಮುಕ್ತಾಗೊಳಿಸಲಾಗಿದೆ.

29-7-24

| | | |
|---|---|---|
| ಅನಂತ. ಫಕ್ಕೀರಪ್ಪ. ಚಿಗರೇರ,<br>ಸದಸ್ಯರು, ಗ್ರಾ.ಕು.ಕೊ.ನಿ.ವೇ,<br>ಹಾವೇರಿ ವೃತ್ತ, ಹೆಸ್ಕಾಂ, ಹಾವೇರಿ. | ತಿಪ್ಪೇಶಿ. ಕೆ,<br>ಉಪ-ಲೆಕ್ಕನಿಯಂತ್ರಣಾಧಿಕಾರಿ ಹಾಗೂ<br>ಸದಸ್ಯರು, ಗ್ರಾ.ಕು.ಕೊ.ನಿ.ವೇ, ಹಾವೇರಿ<br>ವೃತ್ತ, ಹೆಸ್ಕಾಂ, ಹಾವೇರಿ. | ನಾಗಪ್ಪ. ಎಸ್. ಹೆಚ್,<br>ಅಧೀಕ್ಷಕ ಇಂಜಿನೀಯರ[ವಿದ್ಯುತ್] ಹಾಗೂ<br>ಸದಸ್ಯರು, ಗ್ರಾ.ಕು.ಕೊ.ನಿ.ವೇ, ಹಾವೇರಿ<br>ವೃತ್ತ, ಹೆಸ್ಕಾಂ, ಹಾವೇರಿ. |

**ಪ್ರತಿಯನ್ನು :**

1. ಮುಖ್ಯ ಇಂಜಿನೀಯರ[ವಿದ್ಯುತ್], ಹುಬ್ಬಳ್ಳಿ ವಲಯ ಹೆಸ್ಕಾಂ, ಶಿವಗಂಗಾ ಕಾಲೋನಿ, ಕೇಶ್ವಾಪೂರ, ಕುಸಗಲ್ ರೋಡ್, ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು[ಆಡಳಿತ & ಮಾ.ಸಂ.ಅ], ನಿಗಮ ಕಛೇರಿ, ಹೆಸ್ಕಾಂ, ನವನಗರ ಹುಬ್ಬಳ್ಳಿ ರವರಿಗೆ ಆದರ ಪೂರ್ವಕ ಮಾಹಿತಿಗಾಗಿ.
3. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ನಿಗಮ ಕಛೇರಿ, ಹೆಸ್ಕಾಂ, ನವನಗರ, ಹುಬ್ಬಳ್ಳಿ ರವರಿಗೆ ಅಭಿನಂದನೆಗಳೊಂದಿಗೆ.
4. ಉಪ-ಲೆಕ್ಕನಿಯಂತ್ರಣಾಧಿಕಾರಿ, [ನಿಯಂತ್ರಣಾ ಆಯೋಗ & ವ್ಯವಹಾರಗಳು], ನಿಗಮ ಕಛೇರಿ, ಹೆಸ್ಕಾಂ, ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ.
5. ಶ್ರೀ. ಅನಂತ. ಫಕ್ಕೀರಪ್ಪ. ಚಿಗರೇರ, ಸಿ.ಜಿ.ಆರ್.ಎಫ್ ಸದಸ್ಯರು, "ಅವ್ವ ನಿಲಯ" ಶಿವಾಜಿ ನಗರ, 3 ನೇ ಕ್ರಾಸ್, [ಮೋಬೈಲ್ ನಂ : 8884531538] ಹಾವೇರಿ ರವರಿಗೆ ಆದರ ಪೂರ್ವಕ ಮಾಹಿತಿಗಾಗಿ.

**7 ನೇ ಪುಟಕ್ಕೆ ಮುಂದುವರೆದಿದೆ>>>>>**

6. ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಕಾರ್ಯ & ಪಾಲನಾ ವಿಭಾಗ, ಹೆಸ್ಕಾಂ, ರಾಣೇಬೆನ್ನೂರ ರವರ ಮಾಹಿತಿಗಾಗಿ.
7. ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], [ನಿಯಂತ್ರಣಾ ಆಯೋಗ & ವ್ಯವಹಾರಗಳು], ನಿಗಮ ಕಛೇರಿ, ಹೆಸ್ಕಾಂ, ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು[ತಾಂತ್ರಿಕ] ರವರ ಆಪ್ತ ಕಾರ್ಯದರ್ಶಿಗಳು, ನಿಗಮ ಕಛೇರಿ, ಹೆಸ್ಕಾಂ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
9. ಮಾನ್ಯ ಮುಖ್ಯ ಆರ್ಥಿಕ ಅಧಿಕಾರಿಗಳು/ ಮಾನ್ಯ ಮುಖ್ಯ ಆರ್ಥಿಕ ಅಧಿಕಾರಿಗಳು[ಆಂಪ], ರವರ ಆಪ್ತ ಕಾರ್ಯದರ್ಶಿಗಳು, ನಿಗಮ ಕಛೇರಿ, ಹೆಸ್ಕಾಂ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
10. ಆಪ್ತ ಕಾರ್ಯದರ್ಶಿಗಳು, ಓಂಬುಡ್ಸ್‌ಮನ್, ಕೆ.ಇ.ಆರ್.ಸಿ, ನಂ : 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, [ಜೈನ್ ಆಸ್ಪತ್ರೆ ಹಿಂಭಾಗ], ವಸಂತ ನಗರ, ಬೆಂಗಳೂರು-560052, ಸದರಿ ಮಾಹಿತಿಯನ್ನು ಓಂಬುಡ್ಸ್‌ಮನ್, ಕೆ.ಇ.ಆರ್.ಸಿ, ಬೆಂಗಳೂರು ರವರ ದಯಾಪರ ಮಾಹಿತಿಗಾಗಿ ತರುವುದು.
11. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ[ವಿದ್ಯುತ್], ಕಾರ್ಯ & ಪಾಲನಾ ಉಪ-ವಿಭಾಗ, ಹೆಸ್ಕಾಂ, ಬ್ಯಾಡಗಿ ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
12. Shri. Vinoda, 345 Cannaught Road Off, Queens Road, Tasker Town, Bengalore – 560052 [GLT Infrastructure Limited] ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ, **[ನೋಂದಣಿ ಅಂಚೆ & ಸ್ವೀಕೃತಿ ಮುಖಾಂತರ]** [Mobile No : 9035308387].
13. ಕಛೇರಿ ಕಡತ/ ಮಹಾ ಕಡತ.